# ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)

(ಎನ್.ಐ.ಆರ್.ಎಫ್–2024: ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ, ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

ವಿಘ3/29/22-23/ 424

ಉಪಕುಲಸಚಿವರ ಕಛೇರಿ
ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ
ಮಹಾರಾಜ ಕಾಲೇಜು ಶತಮಾನೋತ್ಸವ ಭವನ
ಮೈಸೂರು–570 005
ದಿನಾಂಕ: **21.12.2024**

## ಪ್ರಕಟಣೆ

**ವಿಷಯ: 2024–25ನೇ ಶೈಕ್ಷಣಿಕ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಧನಸಹಾಯ ನೀಡಲು ಅರ್ಜಿಯನ್ನು ಆಹ್ವಾನಿಸಿರುವ ಬಗ್ಗೆ**

**ಉಲ್ಲೇಖ: ವಿ ವಿ ಆದೇಶ ಸಂಖ್ಯೆ ವಿಘ3/29/2023–24 ದಿನಾಂಕ: 14–11–2024**

*****

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಮೈಸೂರು ವಿಶ್ವವಿದ್ಯಾನಿಲಯದ ನೇರ ಆಡಳಿತಕ್ಕೊಳಪಟ್ಟ ಪದವಿ ಕಾಲೇಜುಗಳಲ್ಲಿ, ಸ್ನಾತಕೋತ್ತರ ವಿಭಾಗಗಳಲ್ಲಿ 2024–25ನೇ ಸಾಲಿನಲ್ಲಿ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕದ ವತಿಯಿಂದ ವಿವಿಧ ರೀತಿಯ ಧನಸಹಾಯವನ್ನು ನೀಡಲು ಪ್ರಕಟಣೆ ಹೊರಡಿಸಲಾಗಿದೆ.

**ಧನಸಹಾಯದ ವಿವರ ಕೆಳಕಂಡಂತಿದೆ:**

1. **ಕೊಠಡಿ ಬಾಡಿಗೆ ಧನಸಹಾಯ:** ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆಯದ ಹಾಗೂ ಸ್ವಂತ ನಿವಾಸವಿಲ್ಲದೆ ಬಾಡಿಗೆ ಕೊಠಡಿಗಳಲ್ಲಿ ವಾಸಿಸುತ್ತಿರು ಸ್ಥಳೀಯರಲ್ಲದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಪಡೆದ ದಿನಾಂಕದಿಂದ ಪರೀಕ್ಷೆ ಮುಗಿಯುವವರೆಗೆ ಮಾಹೆಯಾನ ರೂ.300/– ರಂತೆ ಕೊಠಡಿ ಬಾಡಿಗೆ ಧನಸಹಾಯ ನೀಡಲಾಗುವುದು (ನಿಗದಿತ ನಮೂನೆ–1 ಮತ್ತು ನಮೂನೆ–2).
2. **ಪ್ರೌಢಪ್ರಬಂಧ ಧನಸಹಾಯ:** ಅಂತಿಮ ವರ್ಷದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅವರ ವ್ಯಾಸಂಗಕ್ಕೆ ಕಡ್ಡಾಯವಾಗಿರುವಂತಹ ಐಚ್ಛಿಕ ವಿಷಯದ ಬಗ್ಗೆ ಪ್ರೌಢಪ್ರಬಂಧದ ಮೂಲ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವಂತಹ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರೂ.1,500/–, ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ರೂ.1,200/– ಮತ್ತು ಡಿಪ್ಲೊಮ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ.750/– ಧನಸಹಾಯವನ್ನು ನೀಡಲಾಗುವುದು (ನಿಗದಿತ ನಮೂನೆ–3 ಮತ್ತು ನಮೂನೆ–4).
3. **ಕ್ರೀಡೆ ಮತ್ತು ಪಠ್ಯೇತರ ಚಟುವಟಿಕೆಗೆ ಧನಸಹಾಯ:** ಅಂತರ ವಿಶ್ವವಿದ್ಯಾನಿಲಯ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಕ್ರೀಡೆ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ತಲಾ ರೂ.2,000/– ದಂತೆ ಧನಸಹಾಯ ನೀಡಲಾಗುವುದು (ನಿಗದಿತ ನಮೂನೆ–5).
4. **ICS/KAS ಪರೀಕ್ಷೆಗೆ ಧನಸಹಾಯ:** 2024–25ನೇ ಶೈಕ್ಷಣಿಕ ಸಾಲಿನಲ್ಲಿ **UPSC/KPSC** ನಡೆಸುವ ಭಾರತೀಯ ನಾಗರೀಕ ಸೇವೆಗಳ **(ICS/KAS)** ಸ್ಪರ್ಧಾತ್ಮಕ ಪೂರ್ವಭಾವಿ ಪರೀಕ್ಷೆಯಲ್ಲಿ **(Preliminary)** ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮುಖ್ಯ ಪರೀಕ್ಷೆಗೆ ಅನುಕೂಲವಾಗಲು ರೂ.10,000/–ಗಳನ್ನು ಪ್ರೋತ್ಸಾಹಧನವಾಗಿ ನೀಡಲಾಗುವುದು (ನಿಗದಿತ ನಮೂನೆ–6).

ಈ ಪ್ರಕಟಣೆಯ ಜೊತೆ ಲಗತ್ತಿಸಿರುವ ಆಯಾಯ ಧನಸಹಾಯಕ್ಕಾಗಿ ನಿಗದಿಪಡಿಸಲಾಗಿರುವ ನಮೂನೆಗಳನ್ನು ಅರ್ಹ ವಿದ್ಯಾರ್ಥಿಗಳು ಆಯಾಯ ಕಾಲೇಜು/ವಿಭಾಗ/ಕೇಂದ್ರಗಳಿಂದ ಪಡೆದು, ಭರ್ತಿ ಮಾಡಿ, ನಿಗದಿತ ನಮೂನೆಗಳಲ್ಲಿ ಕೇಳಲಾಗಿರುವ ಮಾಹಿತಿಯನ್ನು ದಾಖಲೆಗಳೊಡನೆ ಸದರಿ ಕಾಲೇಜು/ವಿಭಾಗ/ಕೇಂದ್ರದ ಪ್ರಾಂಶುಪಾಲರು/ಅಧ್ಯಕ್ಷರು/ನಿರ್ದೇಶಕರುಗಳಿಗೆ ಸಲ್ಲಿಸತಕ್ಕದ್ದು.

ಆಯಾಯ ಕಾಲೇಜಿನ/ವಿಭಾಗಗಳ ಮುಖ್ಯಸ್ಥರುಗಳು ಸದರಿ ವಿದ್ಯಾರ್ಥಿಗಳ ಅರ್ಜಿ ಮತ್ತು ದಾಖಲೆಗಳನ್ನು ಪರಿಶೀಲಿಸಿ ಅರ್ಹರೆಂದು ತಿಳಿದು ಬಂದಲ್ಲಿ, ಪ್ರತಿ ದಾಖಲೆಗಳನ್ನು ಧೃಢೀಕರಿಸಿ, ಡಿ.ಸಿ. ಪೇಯಬಲ್ ಹುಂಡಿಯನ್ನು (ಪ್ರತಿ ವಿದ್ಯಾರ್ಥಿಗಳ ಹೆಸರು, ವಿಷಯ, ಸೆಮಿಸ್ಟರ್ ಮತ್ತು ಮೊತ್ತವನ್ನು ನಮೂದಿಸಿರಬೇಕು). ಎಸ್.ಬಿ.ಐ. ಖಾತೆ ಹೊಂದಿದವರಿಗೆ ಪ್ರತ್ಯೇಕವಾಗಿ ಮತ್ತು ಇತರೆ ಬ್ಯಾಂಕ್ ಖಾತೆ ಹೊಂದಿದವರಿಗೆ ಪ್ರತ್ಯೇಕವಾಗಿ ಹುಂಡಿ ತಯಾರಿಸಿ, ಹಣಪಾವತಿಗಾಗಿ ದಾಖಲೆಗಳೊಡನೆ ದಿನಾಂಕ: 31–01–2025ರ ಒಳಗಾಗಿ **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಕಛೇರಿಗೆ ದ್ವಿಪ್ರತಿಯಲ್ಲಿ ಕಳುಹಿಸಿಕೊಡಬೇಕೆಂದು ತಿಳಿಸಲಾಗಿದೆ.**

ಮೇಲ್ಕಂಡಂತೆ ನಿಗದಿತ ನಮೂನೆಗಳೊಂದಿಗೆ ಹುಂಡಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಕಳುಹಿಸಿದಲ್ಲಿ ಮಾತ್ರ ಪಾವತಿಗಾಗಿ ಪರಿಗಣಿಸಲಾಗುವುದು. ದಿನಾಂಕ: 31–01–2025ರ ನಂತರ ಬಂದ ಹುಂಡಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಈ ಪ್ರಕಟಣೆಯನ್ನು ಅಂತಿಮ ದಿನಾಂಕದವರೆಗೂ ಕಡ್ಡಾಯವಾಗಿ ವಿಭಾಗದ ನಾಮಫಲಕದಲ್ಲಿ ಪ್ರಕಟಿಸಲು ಮತ್ತು ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ತಿಳಿಸಲು ಕೋರಲಾಗಿದೆ ಹಾಗೂ ಇದರೊಂದಿಗೆ ಲಗತ್ತಿಸಿರುವ ಅರ್ಜಿ ನಮೂನೆಗಳನ್ನು ಆಯಾಯ ವಿಭಾಗಗಳಿಂದಲೇ ಅರ್ಹ ವಿದ್ಯಾರ್ಥಿಗಳಿಗೆ ವಿತರಿಸಲು ಸಹ ಕೋರಲಾಗಿದೆ.

K.N. 23/12/24
ಉಪಕುಲಸಚಿವ

ಗೆ,

1. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು/ಕೇಂದ್ರಗಳು, ಮಾ.ಗಂ, ಮೈಸೂರು
2. ಪ್ರಾಂಶುಪಾಲರು, ಮಹಾರಾಜ/ಯುವರಾಜ/ವಿಶ್ವವಿದ್ಯಾನಿಲಯ ಲಲಿತಕಲಾ ಕಾಲೇಜು., ಮೈವಿವಿ., ಮೈಸೂರು
3. ನಿರ್ದೇಶಕರು, ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ಕಾಲೇಜು, ಮೈವಿವಿ, ಮೈಸೂರು
4. ಕಛೇರಿ ಪ್ರತಿ.